ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ, ಸ್ಥಳವನ್ನೂ ಕೂಡ ಕೊಡುತ್ತೇವೆ, ನೀವು ಆ ವ್ಯವಸ್ಥೆಯನ್ನು ಮಾಡಿ ಎನ್ನುವ ಮನವಿಯನ್ನೂ ಕೂಡ ಆ ಸಂಸ್ಥೆಗಳಲ್ಲಿ ಮಾಡಿದ್ದೇನೆ. ಆದರೆ ಅವರ್‍ಯಾರು ಕೂಡ ಮುಂದೆ ಬಂದಿಲ್ಲ. ಬಾರದೇ ಇರುವ ಕಾರಣ ಸರ್ಕಾರ ಅಂಗಡಿ ಇಟ್ಟುಕೊಂಡು ತರಕಾರಿಯನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಹಾಪ್‌ಕಾಮ್ಸ್ ಹಾಗೂ ಕೆಹೆಚ್‌ಎಫ್ ಸಂಸ್ಥೆ ಇದೆ. ನಮ್ಮ ತೋಟಗಾರಿಕೆ ಸಚಿವರಿಗೆ ತಿಳಿಸಿ ಹಾಪ್‌ಕಾಮ್ಸ್‌ನಲ್ಲೇ ಪ್ರತ್ಯೇಕವಾಗಿ ಸಾವಯವ ಕೃಷಿಯಿಂದ ಬೆಳೆದಂಥ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆನ್ನುವ ಮನವಿಯನ್ನು ಮಾಡಿ ಮಾತುಕತೆ ನಡೆಸುತ್ತೇನೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

ಚಿಕ್ಕಮಗಳೂರಿನ ಕೊಳಚೆ ಪ್ರದೇಶಗಳು

185 - ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)*

ಆ) *ಗುರುತಿಸಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕಾರ್ಯಕ್ರಮಗಳು ಯಾವುವು?*

ಇ) *ಕೊಳಚೆ ನಿರ್ಮೂಲನ ಮಂಡಳಿ ಈ ಪ್ರದೇಶಗಳಿಗಾಗಿ ಮೀಸಲಿಟ್ಟ ಹಣ ಎಷ್ಟು ಹಾಗೂ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?*

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯ ಈ ಕೆಳಗಿನ ತಾಲ್ಲೂಕುಗಳಲ್ಲಿ 51 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು, ತಾಲ್ಲೂಕುವಾರು ಮಾಹಿತಿ ಕೆಳಕಂಡಂತೆ ಇದೆ.

ಚಿಕ್ಕಮಗಳೂರು	-	10
ತರೀಕೆರೆ	-	10
ಕಡೂರು	-	31
ಒಟ್ಟು	-	**51**

ಆ) ಮಂಡಳಿಯು ಘೋಷಿತ ಕೊಳಚೆ ಪ್ರದೇಶಗಳಲ್ಲಿ ಮಾತ್ರ ಹಣಕಾಸಿನ ಲಭ್ಯತೆ ಆಧರಿಸಿ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ. ಅದರನ್ವಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೂಲಭೂತ ಸೌಲಭ್ಯಗಳಾದ - ಕುಡಿಯುವ ನೀರು, ಬೀದಿ ದೀಪ, ಚರಂಡಿ, ರಸ್ತೆ, ಶೌಚಾಲಯ, ಸಾಮೂಹಿಕ ಸ್ನಾನಗೃಹ ಮುಂತಾದ ಮೂಲಭೂತ ಸೌಲಭ್ಯಗಳನ್ನು ಆಯ್ದು

ಕೊಳಚೆ ಪ್ರದೇಶಗಳಲ್ಲಿ ವಸತಿ ಗೃಹ ಯೋಜನೆ ಅಡಿ ಆರ್ಥಿಕ ದುರ್ಬಲ ವರ್ಗದ ಮನೆಗಳನ್ನು ನಿರ್ಮಿಸಲಾಗುತ್ತಿದೆ.

ಇ) 1997-98ನೇ ಸಾಲಿನ ಕ್ರಿಯಾ ಯೋಜನೆ ಅಡಿಯಲ್ಲಿ ಈ ಕೊಳಚೆ ಪ್ರದೇಶಗಳಿಗಾಗಿ ಮೀಸಲಿಡಲಾಗಿದ್ದ ಹಾಗೂ ಖರ್ಚು ಮಾಡಲಾಗಿರುವ ಹಣದ ವಿವರಗಳು ಕೆಳಗಿನಂತಿವೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ನಗರ/ ಪಟ್ಟಣ	ಕೊಳಚೆ ಪ್ರದೇಶದ ಹೆಸರು	ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೀಸಲಿಟ್ಟ ಹಣ	ಖರ್ಚು ಮಾಡಿದ ಹಣ
1	2	3	4	5
1)	ಚಿಕ್ಕಮಗಳೂರು	ತಮಿಳು ಮತ್ತು ಭೋವಿ ಕಾಲೋನಿ	6.75	6.75
2)	ತರೀಕೆರೆ	ಚೌಡೇಶ್ವರಿ ಕಾಲೋನಿ	1.00	1.00
		ದೊಡ್ಡಕೆರೆ ಏ.ಕೆ. ಕಾಲೋನಿ	1.00	1.00
		ಟಿ. ನಾಗಪ್ಪ ಕಾಲೋನಿ	6.75	6.75
3)	ಕಡೂರು	ತ್ಯಾಗರಾಜನಗರ	1.00	1.00
		ಮೂರ್ತಿಹಾಳ್ ಕೊಳಚೆ ಪ್ರದೇಶ	10.91	ಕೆಲಸ ಪ್ರಾರಂಭಿಸ ಲಾಗುವುದು.
		ನರಭೋವಿ ಕಾಲೋನಿ	6.75	6.75
4)	ಬೀರೂರು	ಭೋವಿ ಕಾಲೋನಿ	6.75	6.75
		ಏ.ಕೆ. ಕಾಲೋನಿ	1.25	1.25
		ಅಂಜುಮಾನ್ ಮೊಹಲ್ಲಾ	5.15	5.15
	ಒಟ್ಟು		**47.31**	**37.12**

ಶ್ರೀ ಸಿ. ಆರ್. ಸಗೀರ್ ಅಹಮದ್ : ನಾನು ಈ ಸದನಕ್ಕೆ ಸದಸ್ಯನಾಗಿ ಬಂದು ಮೂರು ವರ್ಷಗಳಾಯಿತು, ನಾನು ಈ ಹಿಂದೆಯು ಈ ಸದನದ ಸದಸ್ಯನಾಗಿದ್ದೆನು. ಸರ್ಕಾರ ಹೇಳುವಂಥ ಒಂದು ಕಾರ್ಯಕ್ರಮವೂ ಕೂಡ ಯಶಸ್ವಿಯಾಗಿ ನನ್ನ ಕ್ಷೇತ್ರದಲ್ಲಂತೂ ನಡೆದಿಲ್ಲ. ಮತ್ತೆ ಸರ್ಕಾರ ಹಾಕಿಕೊಳ್ಳುವಂಥ ಕಾರ್ಯಕ್ರಮಗಳೆಲ್ಲಾ ಸುಳ್ಳೇ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮೂರು ವರ್ಷಗಳಿಂದ ಈ ನಮ್ಮ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ಅನೇಕ

ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ವಿಚಾರ ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಈಗ ಮೂರು ವರ್ಷಗಳಿಂದ ನನ್ನ ಕ್ಷೇತ್ರದಲ್ಲಿರುವ ಹತ್ತು ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಒಂದು ಪೈಸೆಯನ್ನೂ ಕೂಡ ಈ ಸರ್ಕಾರದವರು ಇಲ್ಲಿಯವರೆಗೆ ಖರ್ಚು ಮಾಡಿಲ್ಲ. ಎರಡನೆಯದಾಗಿ ಶಾಸಕರಿಗೆ ಮಾನ್ಯ ಮಂತ್ರಿಗಳು ಒಂದು ಪತ್ರವನ್ನು ಬರೆದಿದ್ದರು. ಅದೇನೆಂದರೆ, ಹುಡ್ಕೊ ನೆರವಿನಿಂದ ಕೊಳಚೆ ಪ್ರದೇಶದ ನೈರ್ಮಲ್ಯಕ್ಕಾಗಿ ಆರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸತಕ್ಕದ್ದು ಎನ್ನುವುದು, ನಾವು ಅದಕ್ಕೆ ಬರವಣಿಗೆಯ ಮೂಲಕ ಕಳುಹಿಸಿಕೊಟ್ಟಿದ್ದೇವೆ. ಆ ಆರು ಲಕ್ಷ ರೂಪಾಯಿಗಳ ಕೆಲಸವೇನಾಯಿತು? ಜೊತೆಗೆ ಇಲ್ಲಿಯವರೆಗೆ ಕೆಲಸ ಪ್ರಾರಂಭ ಮಾಡದಿರುವುದಕ್ಕೆ ಕಾರಣವೇನು? ಅಥವಾ ಈ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ನಿವಾಸಿಗಳ ಮೇಲೆ ಸರ್ಕಾರಕ್ಕೆ ಕಾಳಜಿ ಇಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಉಪಾಧ್ಯಕ್ಷರೇ, ಕಳೆದ ಸಾರಿ 6 ಲಕ್ಷದ 75 ಸಾವಿರ ರೂಪಾಯಿಗಳನ್ನು ಒಂದು ಕ್ಷೇತ್ರಕ್ಕೆ ಕೊಡಬೇಕು ಎಂದು ತೀರ್ಮಾನಿಸಿ ಮಾನ್ಯ ಸದಸ್ಯರಿಗೆ ಕಾಗದ ಕಳುಹಿಸಿದ್ದೆವು. ಅದಕ್ಕೆ ಈಗಾಗಲೇ ಅವರು ಚಿಕ್ಕಮಗಳೂರು ಟೌನಿನಲ್ಲಿರುವ ತಮಿಳು ಮತ್ತು ಬೋವಿ ಕಾಲೋನಿಗಳಲ್ಲಿ ತೆಗೆದುಕೊಳ್ಳಬೇಕಾಗಿರತಕ್ಕ ಕೆಲಸಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಅದರಂತೆ 6 ಲಕ್ಷದ 75 ಸಾವಿರ ರೂಪಾಯಿ ಹಣವನ್ನು ನಾವು ಈಗಾಗಲೇ ಖರ್ಚು ಮಾಡಿದ್ದೇವೆ. ಇದನ್ನು ತಾವು ತಮಿಳು ಮತ್ತು ಬೋವಿ ಕಾಲೋನಿಗಳಿಗೆ ಹೋಗಿ ನೋಡಬಹುದು. ಸ್ಥಳ ಪರಿಶೀಲನೆ ಮಾಡಬಹುದು. ಅಲ್ಲಿ ನಾವು ಈಗಾಗಲೇ 6 ಲಕ್ಷದ 75 ಸಾವಿರ ರೂಪಾಯಿ ಹಣವನ್ನು ಖರ್ಚು ಮಾಡಿದ್ದೇವೆ. ಇನ್ನೂ ಹೆಚ್ಚಿನ ಮಾಹಿತಿಗಳು ಬೇಕಾಗಿದ್ದರೆ, ಕಳೆದ ಮೂರು ವರ್ಷಗಳಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದೇವೆ ಎನ್ನುವುದನ್ನು ತಮಗೆ ತಿಳಿಸುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ತಾವು ಹುಡ್ಕೋದಿಂದ ಸಾಲ ಪಡೆದಿದ್ದೀರಿ. ತಮಿಳು ಮತ್ತು ಬೋವಿ ಕಾಲೋನಿಗಳಲ್ಲಿ ಕೆಲಸವಾಗಿದೆ ಅಥವಾ ಇಲ್ಲ ಎನ್ನುವಂಥಾದ್ದರ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಪ್ರಶ್ನೆ ಏನೆಂದರೆ, ಸರ್ಕಾರದವರ ಮಾಹಿತಿ ಪ್ರಕಾರ ಯಾವ ಯಾವ ಕೆಲಸಗಳನ್ನು ತಾವು ಆ ಭಾಗದಲ್ಲಿ ತೆಗೆದುಕೊಂಡಿದ್ದೀರಿ. ಇದರ ಬಗ್ಗೆ ತಾವು ಮಾಹಿತಿ ಕೊಡಿ. ಆಗ ಹಣ ಖರ್ಚಾಗಿದೆಯೋ, ಇಲ್ಲವೋ ಎನ್ನುವುದು ತಮಗೇ ಗೊತ್ತಾಗುತ್ತದೆ.

ಶ್ರೀ ಹೆಚ್. ಡಿ. ರೇವಣ್ಣ : 6 ಲಕ್ಷದ 75 ಸಾವಿರ ರೂಪಾಯಿ ಖರ್ಚಾಗಿರುವ ಬಗ್ಗೆ ಪೂರ್ಣ ಮಾಹಿತಿಯನ್ನು ತಮಗೆ ಕೊಡುತ್ತೇನೆ.

ಶ್ರೀ ಸಿ. ಆರ್. ಸಗೀರ್.ಅಹಮದ್ : ನನ್ನ ಪ್ರಶ್ನೆಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಅಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಂಡಿದ್ದೀರಿ. ಎನ್ನುವ ಬಗ್ಗೆ ಅಧಿಕಾರಿಗಳು ಮಾಹಿತಿ ಕೊಡಬೇಕಲ್ಲವೇ?

ಶ್ರೀ ಹೆಚ್. ಡಿ. ರೇವಣ್ಣ : ಮಾಹಿತಿಯನ್ನು ತಮಗೆ ಕಳುಹಿಸಿ ಕೊಡುತ್ತೇನೆ.

ಉಪಾಧ್ಯಕ್ಷರು : ಅವರು ಕಳುಹಿಸಿ ಕೊಡುತ್ತೇನೆ ಎಂದು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ನಾವು ಮಾತನಾಡಲು ಪ್ರಾರಂಭ ಮಾಡಿದರೆ ತಾವು ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳುತ್ತೀರಿ. ಆಯಿತು, ನಾನು ಕುಳಿತುಕೊಳ್ಳುತ್ತೇನೆ. ಈ ಸದನದಲ್ಲಿ ಯಾವ ಪ್ರಶ್ನೆಗೂ ಯಾವುದೇ ಇಲಾಖೆಯವರು ಸಮರ್ಪಕವಾದಂಥ ಉತ್ತರ ನೀಡುತ್ತಿಲ್ಲ.

ಉಪಾಧ್ಯಕ್ಷರು : ತಾವು ಏನು ಪ್ರಶ್ನೆ ಕೇಳಿದ್ದೀರಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ ಎಂದು ಕೇಳಿದ್ದೀರಿ. ಅದಕ್ಕೆ ಗುರುತಿಸಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ತಾಲ್ಲೂಕುವಾರು ಮಾಹಿತಿ ಕೇಳಿದ್ದೀರಿ, ಅದಕ್ಕೆ ಚಿಕ್ಕಮಗಳೂರು -10, ತರೀಕೆರೆ-10, ಕಡೂರು -30 ಎಂದು ಹೇಳಿದ್ದಾರೆ. ತಮ್ಮ ಪ್ರಶ್ನೆಗೆ ಅವರು ಉತ್ತರವನ್ನು ಕೊಟ್ಟಿದ್ದಾರಲ್ಲಾ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಹಣಕಾಸಿನ ಲಭ್ಯತೆಯನ್ನು ಆಧರಿಸಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳುತ್ತಾರೆ. ಯಾವುದೇ ಒಂದು ಪ್ರಶ್ನೆಗೆ ಸಮರ್ಪಕವಾದಂಥ ಉತ್ತರ ಸಿಗದಿದ್ದರೆ ನಾವು ಏಕೆ ಪ್ರಶ್ನೆ ಹಾಕಬೇಕು? ಕಳೆದ ಸಾರಿ ನಾನು ಒಂದೂ ಪ್ರಶ್ನೆಯನ್ನು ಹಾಕಲಿಲ್ಲ. ಏಕೆಂದರೆ, ಸರ್ಕಾರ ಕೊಡುವಂಥ ಉತ್ತರದಿಂದ ನಮಗೆ ನೆಮ್ಮದಿಯಾಗುವುದಿಲ್ಲ, ಅವರು ಮಾಡುವಂಥ ಕೆಲಸ ನಮಗೆ ತೃಪ್ತಿಯಾಗುವುದಿಲ್ಲ. ಆದ್ದರಿಂದ ಪ್ರಶ್ನೆ ಹಾಕುವುದರಿಂದ ಏನು ಪ್ರಯೋಜನ? ಖರ್ಚಾಗಿದೆ ಎಂದು ಹೇಳುತ್ತಿದ್ದಾರೆ, ಖರ್ಚಾಗಿದ್ದರೆ ಯಾವುದಕ್ಕೆ ಖರ್ಚಾಗಿದೆ ಎನ್ನುವ ಮಾಹಿತಿಯನ್ನು ಸರ್ಕಾರದವರು ಕೊಡಬೇಕು. ನನ್ನ ಕ್ಷೇತ್ರದಲ್ಲಿ ನಡೆದಿರುವಂಥ ಕೆಲಸಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲವೇ?

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸದಸ್ಯರು ಅಲ್ಲಿಗೆ ಹೋಗಿ ನೋಡಬೇಕು.

ಶ್ರೀ ಸಿ. ಆರ್. ಸಗೀರ್ ಅಹಮದ್ : ನಾನು ಮತ್ತೊಂದು ಸಲ ಚುನಾವಣೆಗೆ ನಿಂತು ಗೆದ್ದು ಬಂದು ನಂತರ ಹೋಗಿ ನೋಡಬೇಕಷ್ಟೇ.

ಉಪಾಧ್ಯಕ್ಷರು : ಪ್ರತಿಕ್ಷೇತ್ರಕ್ಕೆ 6 ಲಕ್ಷದ 75 ಸಾವಿರ ರೂಪಾಯಿಗಳನ್ನು ಒದಗಿಸಿರುವಂತೆ ತಮಗೂ 6 ಲಕ್ಷ 75 ಸಾವಿರವನ್ನು ಒದಗಿಸಿದ್ದಾರೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ನನಗೆ ಮಂತ್ರಿಗಳ ಕಾಗದ ಬಂದ ನಂತರ ನಾನು ಆ ಹಣದಲ್ಲಿ ಇಂಥಿಂಥ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಕಾಗದ ಬರೆದಿದ್ದೇನೆ. ಇಲಾಖೆ ವತಿಯಿಂದ ಆಗಿರುವಂಥ ಕೆಲಸಗಳೇನು ಎನ್ನುವುದು ನನಗೆ ಗೊತ್ತಿದೆ. ಆದರೆ ತಮಗೆ ಇದರ ಬಗ್ಗೆ ಮಾಹಿತಿ ಇರಬೇಕಲ್ಲವೇ? ಏಕೆಂದರೆ, ಉಪಾಧ್ಯಕ್ಷರೇ, ತಮ್ಮ ಕ್ಷೇತ್ರದಲ್ಲಿ ಏನು ಕೆಲಸವಾಗಿದೆ ಎನ್ನುವುದನ್ನು ತಾವು ನೋಡಬಹುದು. ತಾವು ಹೋಗಿ ನೋಡಿ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ತಾವು ದಯಮಾಡಿ ನೋಡಿ, ಆಗ ನಿಮಗೇ ಅದರ ಬಗ್ಗೆ ಅರಿವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ಅವರು ನೋಡಿಲ್ಲವೆಂದೇ ಅರ್ಥ?

ಉಪಾಧ್ಯಕ್ಷರು : ನೀವು ಆ ರೀತಿಯ ಪ್ರಶ್ನೆಯನ್ನು ಕೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಕ್ಷೇತ್ರದಲ್ಲಿ ನೀವು ನೋಡಿಲ್ಲ ಎಂದು ಅವರು ಆರೋಪಣೆ ಮಾಡುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ ತಾವು ಪ್ರತಿವಾರ ಹೋಗುತ್ತಿದ್ದೀರಿ.

ಉಪಾಧ್ಯಕ್ಷರು : ನಮ್ಮ ಕ್ಷೇತ್ರದಲ್ಲಿ ಏನೇನು ಕೆಲಸಗಳನ್ನು ಮಾಡಿದ್ದಾರೆ ಎನ್ನುವ ಬಗ್ಗೆ ನಾನು ಅವರಿಗೆ ಪತ್ರ ಬರೆದಿದ್ದೇನೆ. ನನಗೆ ಉತ್ತರ ಬರೆದಿದ್ದಾರೆ. ನನ್ನ ಕ್ಷೇತ್ರದಲ್ಲಿ ಏನೇನು ಲೋಪದೋಷಗಳಾಗಿದ್ದವು ಅವುಗಳನ್ನು ಸರಿಪಡಿಸಿ ಎಂದು ನಾನು ಪತ್ರ ಬರೆದಿದ್ದೇನೆ. ಮಂತ್ರಿಗಳು ನನಗೆ ಉತ್ತರ ಬರೆದಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ಎಲ್ಲಾ ಕ್ಷೇತ್ರಗಳಿಗೂ 6 ಲಕ್ಷ 75 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿರತಕ್ಕಂಥ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ. ಅವರ ಕ್ಷೇತ್ರದಲ್ಲೂ ಸಹ ಇದಕ್ಕಾಗಿ 6 ಲಕ್ಷ 75 ಸಾವಿರ ರೂಪಾಯಿ ಖರ್ಚಾಗಿದೆ. ಅವರು ಹೇಳುತ್ತಿರುವುದೇನೆಂದರೆ, ಖರ್ಚಾಗಿರುವ ಹಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಗೊತ್ತಿದೆ ಎಂದು. ಆ ಮಾಹಿತಿ ಪೂರ್ತಿ ತಮಗೆ ಗೊತ್ತಿದ್ದಮೇಲೆ ಪುನಃ ಆ ಪ್ರಶ್ನೆಯನ್ನು ಏಕೆ ಕೇಳುವುದು?

ಶ್ರೀ ಸಿ. ಆರ್. ಸಗೀರ್ ಅಹಮದ್ : ಏಕೆಂದರೆ, ನಾನು ಕಳುಹಿಸಿಕೊಟ್ಟಿರತಕ್ಕಂಥ ಕೆಲಸಗಳು ಬೇರೆಯದಾಗಿವೆ. ಆದರೆ ಇಲಾಖೆಯವರು ತೆಗೆದುಕೊಂಡಿರುವುದೇ ಬೇರೆಯದಾಗಿದೆ. ಕುಡಿಯುವ ನೀರಿಗೆ ಕೊಳವೆ ಬಾವಿ ಕೊರೆದಿದ್ದಾರೆ. ನಾನು ಬರೆದಿರುವಂಥ ಪತ್ರದಲ್ಲಿ ಆ ಕೆಲಸಕ್ಕೆ ಮಾನ್ಯತೆ ನೀಡಿಲ್ಲ. ಅಲ್ಲಿ ಕೊಳವೆಗಳನ್ನು ಅಳವಡಿಸಿದ್ದಾರೆ. ನಾನು ಮಂಗಳೂರಿಗೆ ಹೋಗಬೇಕು ಎಂದರೆ ನೀವು ನನ್ನನ್ನು ಬೊಂಬಾಯಿ ಬಸ್ಸಿನಲ್ಲಿ ಕುಳ್ಳಿರಿಸಿದರೆ ನಾನು ಅದನ್ನು ಒಪ್ಪಿಕೊಂಡು ಬೊಂಬಾಯಿಗೆ ಹೋಗಲೇ? ನಾನು ಹೇಳುವಂಥ ವಿಚಾರಕ್ಕೆ ತಾವು ಮಾನ್ಯತೆ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು : ಅವರು ಮಾಹಿತಿ ತರಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಅಲ್ಲಿಗೆ ಇದು ಮುಗಿಯಿತು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸದಸ್ಯರು ಯಾವಯಾವ ಬಾಬಿಗೆ ಹಣವನ್ನು ಖರ್ಚು ಮಾಡಬೇಕೆನ್ನುವ ತಮ್ಮ ವಿಚಾರವನ್ನು ತಿಳಿಸಿದ್ದರೂ ಬೇರೆ ಬೇರೆ ಕೆಲಸಗಳಿಗೆ ಹಣ ಖರ್ಚು ಮಾಡಲಾಗಿದೆ ಎಂದು ಹೇಳುತ್ತಿದ್ದೀರಿ. ಈಗ ನಾನು ಹೇಳುತ್ತಿದ್ದೇನೆ, ಆ ಮಾಹಿತಿಗಳೇನು ಎನ್ನುವುದನ್ನು ಕೊಡುತ್ತೇವೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸದಸ್ಯರು ಯಾವ ಕೆಲಸಗಳನ್ನು ಹೇಳಿದ್ದರೋ, ಆ ಕೆಲಸಗಳಿಗೇ 6 ಲಕ್ಷ 75 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದನ್ನು ಬೇರೆ ಯಾವ ಕೆಲಸಕ್ಕೂ ಡೀವಿಯೇಟ್ ಮಾಡಿಲ್ಲ. ನೀರು ಚರಂಡಿ ಮತ್ತು ಸಮುದಾಯ ಭವನ ಈ ಮೂರು ಕೆಲಸಗಳನ್ನು ಕೊಟ್ಟಿದ್ದರು. ಈ ಮೂರು ಕೆಲಸಗಳಿಗೇ 6 ಲಕ್ಷ 75 ಸಾವಿರ ಖರ್ಚು ಮಾಡಿದ್ದೇವೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಇಲಾಖೆಯ ವತಿಯಿಂದ ಸಿಕ್ಕಿರುವ ಎಲ್ಲಾ ದಾಖಲಾತಿಗಳನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಮಂತ್ರಿಗಳು ಆಡಿರುವಂಥ ಮಾತಿನಲ್ಲಿ ಏನಾದರೂ ತಪ್ಪಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಉಪಾಧ್ಯಕ್ಷರು : ತಾವು ಅದನ್ನು ಕಳುಹಿಸಿಕೊಡಿ. ಆಮೇಲೆ ಅದನ್ನು ನೋಡೋಣ.